**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 30.10.2025**

**ಮುಖ್ಯ ವಿಚಾರಣೆಃ ಶ್ರೀ ಕೆ ಕೆ ಜಿ ಪ್ರತಿವಾದಿ 1, 2(ಎ ರಿಂದ ಸಿ), 3 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಿಂದಃ**

**ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ನಾನೇ ಪ್ರಮಾಣೀಕರಿಸಿದ ನನ್ನ ಶಪಥ ಪತ್ರದ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಹಾಗೂ ಅವುಗಳಲ್ಲಿರುವ ಸಹಿಗಳು ನನ್ನವೇ ಆಗಿವೆ. ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಲಾಗಿದ್ದು ಅವುಗಳನ್ನು ನಿಶಾನೆಯಾಗಿ ಗುರುತಿಸಲಾಗಿದೆ.**

| | |
|---|---|
| ನಿಡಿ.1 | ದಿಃ 16.11.1966 ರ ದತ್ತು ಪತ್ರದ ದೃಢೀಕೃತ ನಕಲು |
| ನಿಡಿ.2 | 9 ಐ ಎಲ್ ದೃಢೀಕೃತ ನಕಲುಗಳನ್ನು ಒಟ್ಟಾಗಿ |
| ನಿಡಿ.3 ರಿಂದ 11 | 9 ಗಣಕೀಕೃತ ಪಹಣಿ ಪತಿರಕೇಗಳನ್ನು ಕ್ರಮವಾಗಿ |
| ನಿಡಿ.12 | ಮರೀಗೌಡರ ಮರಣಾ ಸಮರ್ಥನಾ ಪ್ರಮಾಣಪತ್ರ |
| ನಿಡಿ.13 | ಶಂಕರೇಗೌಡರವರ ಮರಣ ಸುಮರ್ಥನಾ ಪ್ರಮಾಣಪತ್ರ, ಎಂದು ಗುರುತಿಸಲಾಯಿತು. |

**ದಿಃ 18.11.1994 ರ ದೃಢಿಕೃತ ಮರಣಶಾಸನ ಪತ್ರವನ್ನು ನಿಶಾನೆಗೊಳಿಸಲು ಕೋರಿರುತ್ತಾರೆ. ವಾದಿ ಪರ ವಕೀಲರು ಅಸಲು ಮರಣಶಾಸನ ಪತ್ರ ಹಾಜರು ಪಡಿಸಿಲ್ಲ, ಹಾಗೂ ಮರಣಶಾಸನ ಪತ್ರವನ್ನು ಭಾರತೀಯ ಸಾಕ್ಷ್ಯ ಅಧಿನಿಯಮ ಹಾಗೂ ಭಾರತೀಯ ವಾರಸು ಕಾಯಿದೆ ಅನ್ವಯ ಸಾಬೀತು ಪಡಿಸಬೇಕಾಗಿರುತ್ತದೆ. ಆದ್ದರಿಂದ ಸದರಿ**

*ದಾಖಲೆಯನ್ನು ನಿಶಾನೆ ಮಾಡಬಾರದಾಗಿ ತಕಾರಾರು ಮಾಡಿರುತ್ತಾರೆ. ಉಭಯಪಕ್ಷಗಾರರನ್ನು ಆಲಿಸಲಾಯಿತು. ಪರಶೀಲಿಸಿ ವಾದಿ ಪರ ವಕೀಲರು ಎತ್ತಿರುವ ತಕರಾರನ್ನು ಎತ್ತಿ ಹಿಡಿದು, ಮರಣ ಶಾಸನವವನ್ನು ಕಾನೂನು ರೀತಿ ಸಾಬೀತು ಪಡಿಸಲು ನಿರ್ದೇಶಿಸಿ ನಿಶಾನೆಯಾಗಿ ಗುರುತಿಸಲು ಕಾನೂನಿನಲ್ಲಿ ರಹ ಇಲ್ಲ ಎಂದು ಕೆ ಕೆ ಜಿ ರವರ ಮನವಿಯನ್ನು ತಿರಸ್ಕರಿಸಲಾಯಿತು.*

*ಶ್ರೀ ಕೆ ಕೆ ಜಿ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು.*

*ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬರೆಳೆಚ್ಚುಗೊಳಿಸಲಾಯಿತು.*

*ಓ ಹೇ ಕೇ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*
*ಮತ್ತು ಜೆಎಂಎಫ್‌ಸಿ., ಪಾಂಡವಪುರ.*